**ಓ ಎಸ್ 9/2021 ಡಿ ಡಬ್ಲ್ಯೂ 1**

**ಸಾಕ್ಷಿಯನ್ನು ದಿಃ 06.04.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲುಃ ವಾದಿ ಪರ ಶ್ರೀ ಎಂ. ಎಸ್ ವಕೀಲರಿಂದಃ**

ನಿಶಾನೆ ಡಿ–28 ರ ದಿನಾಂಕ 10.09.1986 ರ ಪಂಚಾಯಿತಿ ಪಾಲುಪಟ್ಟಿಯ ಆಧಾರದ ಮೇಲೆ ಕಂದಾಯ ದಾಖಲೇಗಳು ಬದಲಾವಣೆ ಆಗಿದೆ ಮತ್ತು ಅಂತಹ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸದರಿ ಪಂಚಾಯಿತಿ ಪಾಲುಪಟ್ಟಿಯ ಆಧಾರದ ಮೇಲೆ ಬದಲಾವಣೆ ಆದ ಆರ್ ಟಿ ಸಿ ಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಪಂಚಾಯಿತಿ ಪಾಲುಪಟ್ಟಿಯ ಆಧಾರದ ಮೇಲೆ ವೆಂಕಟೇಶ್ ರವರು ಹಾಗೂ ನಾಗರಾಜೇಗೌಡರು ಆಸ್ತಿಗಳನ್ನು ಮಾರಾಟ ಮಾಡಿದ ಸಂಬಂಧ ಕ್ರಯಪತ್ರಗಳನ್ನು ಹಾಜರುಪಡಿಸಿರುವುದಾಗಿ ಹೇಳುತ್ತಾರೆ. ವೆಂಕಟೇಶ್ ರವರು ನಿಶಾನೆ ಡಿ–8 ರೀತ್ಯಾ ಕ್ರಯಪತ್ರ ಮಾರಾಟ ಮಾಡಿದ್ದಾರೆ. ಸದರಿ ಕ್ರಯಪತ್ರದಲ್ಲಿ ನಿಶಾನೆ ಡಿ–28 ರ ದಿನಾಂಕ 10.09.1986 ರ ಪಂಚಾಯಿತಿ ಪಾಲುಪಟ್ಟಿಯ ಉಲ್ಲೇಖ ಆಗಿಲ್ಲ. ನಿಶಾನೆ ಡಿ–28 ರ ದಿನಾಂಕ 10.09.1986 ರ ಪಂಚಾಯಿತಿ ಪಾಲುಪಟ್ಟಿಯಲ್ಲಿ ನಮ್ಮ ತಂದೆಯವರ ಪಾಲಿಗೆ ಸರ್ವೆ ನಂಬರ್ 72/1 ರಲ್ಲಿ 15 ಗುಂಟೆ, ಸರ್ವೆ ನಂಬರ್ 63 ರಲ್ಲಿ 5 ವರೆ ಗುಂಟೆ, ಸರ್ವೆ ನಂಬರ್ 63/2 ಬಿ ರಲ್ಲಿ 2 ಗುಂಟೆ ಮತ್ತು ಪಾಂಡವಪುರದ ಚಿಕ್ಕ ಮಸೀದಿ ಬೀದಿಯಲ್ಲಿರುವ ಮನೆಯಲ್ಲಿ ಅರ್ಧ ಮನೆ ಬಂದಿರುವ ಬಗ್ಗೆ ನಮೂದು ಇದೆ. ಹಾಗೇಯೇ ವೆಂಕಟೇಶ್ ರವರ ಪಾಲಿಗೆ ಸರ್ವೆ ನಂಬರ್ 35 ರಲ್ಲಿ 35 ಗುಂಟೆ ಮತ್ತು ಅದೇ ಸರ್ವೆ ನಂಬರ್ ನಲ್ಲಿ 5 ಗುಂಟೇ ನೀಡಿರುವ ಬಗ್ಗೆ ನಮೂದು ಇದೆ. ಹಾಗೇ ನಾಗರಾಜೇಗೌಡರಿಗೆ ಸರ್ವೆ ನಂಬರ್ 72 ರಲ್ಲಿ 20 ಗುಂಟೆ, ಸರ್ವೆ ನಂಬರ್ 230 ರಲ್ಲಿ 15 ಗುಂಟೆ ಮತ್ತು ಪಾಂಡವಪುರದ ಆರ್ ಸಿ ಸಿ ಮನೆಯಲ್ಲಿ ಅರ್ಧ ಮನೆ ನೀಡಿರುವ ಬಗ್ಗೆ ನಮೂದು ಇದೆ. ಸಾಕ್ಷಿಯೂ ಮುಂದುವರೆದು ಅಷ್ಟೂ ಆಸ್ತಿಗಳನ್ನು ಅವರಿಬ್ಬರೂ

ಮಾರಾಟ ಮಾಡಿದ್ದಾರೆ. "ಈ ಹಿಂದೆ ಖುಷ್ಕಿ ಜಮೀನು ಪಂಚಾಯಿತಿ ಪಾಲು ಪಾರಿಕತು ಮಾಡಿಕೊಂಡು ಅನುಭವಿಸುತ್ತಾ ಬರುತ್ತಿರುವುದು ಸರಿಯಷ್ಟೇ, ಆದರೆ ಪಾಂಡವಪುರ ಗ್ರಾಮಕ್ಕೆ ಸೇರಿದ ತರಿ ಜಮೀನು ವಿಭಾಗವಾಗಿಲ್ಲದ ಪ್ರಯುಕ್ತ " ಎಂದು ನಿಶಾನೆ ಡಿ– 28 ರ ದಿನಾಂಕ 10.09.1986 ರ ಪಂಚಾಯಿತಿ ಪಾಲು ಪಾರಿಕತ್ತಿನಲ್ಲಿ ನಮೂದು ಇದೆ ಎಂದರೆ ಸರಿ. ನಿಶಾನೆ ಡಿ– 28 ರ ದಿನಾಂಕ 10.09.1986 ರ ಪಂಚಾಯಿತಿ ಪಾಲು ಪಾರಿಕತ್ತಿಕ್ಕಿಂತ ಮೊದಲು ಸದರಿ ದಾಖಲೆಯಲ್ಲಿ ನಮೂದು ಆಗಿರುವ 2 ಐಟಂ ಸ್ವತ್ತುಗಳು ವಿಭಾಗ ಆಗಿದ್ದವು. ಆ 2 ಐಟಂ ಸ್ವತ್ತುಗಳು ವಿಭಾಗ ಆಗಿದ್ದ ಬಗ್ಗೆ ಮತ್ತು ಅವುಗಳನ್ನು ಪುನಃ ನಿಶಾನೆ ಡಿ –28 ರಲ್ಲಿ ಸೇರಿಸಿರುವ ಬಗ್ಗೆ ನಿಡಿ–28 ರಲ್ಲಿ ಉಲ್ಲೇಖ ಇಲ್ಲ. ನಿಶಾನೆ ಡಿ– 28 ರ ದಿನಾಂಕ 10.09.1986 ರ ಪಂಚಾಯಿತಿ ಪಾಲು ಪಾರಿಕತ್ತಿನಲ್ಲಿರುವ ಸರ್ವೆ ನಂಬರ್ 72 ರ 6 ಗುಂಟೆ ಜಮೀನನ್ನು ನಮ್ಮ ಅಜ್ಜ ಮತ್ತು ತಾತನ ಪಾಲಿಗೆ ಈ ಹಿಂದಿನ ಮೌಖಿಕ ವಿಭಾಗದಲ್ಲಿ ಅಜ್ಜ ಪಾಲು ಎಂದು ಬಿಡಲಾಗಿತ್ತು ಎಂದರೆ ಸರಿಯಲ್ಲ. ಸರ್ವೆ ನಂಬರ್ 63 ರಲ್ಲಿನ 5 ವರೆ ಗುಂಟೆ ಸರ್ವೆ ನಂಬರ್ 72 ರಲ್ಲಿನ 15 ಗುಂಟೆ, ಸರ್ವೆ ನಂಬರ್ 63/2 ರಲ್ಲಿನ 39 ಗುಂಟೆ ಮತ್ತು ಪಾಂಡವಪುರ ಟೌನ್ ಚಿಕ್ಕ ಮಸೀದಿ ಬೀದಿಯಲ್ಲಿರುವ ಆರ್ ಸಿ ಸಿ ಮನೆಯಲ್ಲಿ ಅರ್ಧ ಮನೆ ಮತ್ತು ಮುನ್ಸಿಪಲ್ ಖಾತಾ ನಂಬರ್ 119/80, ಅಸಿಸ್‌ಮೆಂಟ್ ನಂಬರ್109/106 ರ ಮನೆ ಮತ್ತು ಪಾಂಡವಪುರ ಟೌನ್ ಕೃಷ್ಣಾ ನಗರ ಬಡಾವಣೆಯಲ್ಲಿರುವ ನಿವೇಶನ ಇವುಗಳು ನಮ್ಮ ತಂದೆಗೆ ಈ ಹಿಂದೆ ಮೌಖಿಕ ವಿಭಾಗದಲ್ಲಿ ನೀಡಿದಂತಹ ಸ್ವತ್ತುಗಳು ಆಗಿವೆ ವಿನಃ ನಿಶಾನೆ ಡಿ– 28 ರ ದಿನಾಂಕ 10.09.1986 ರ ಪಂಚಾಯಿತಿ ಪಾಲು ಪಾರಿಕತ್ತಿನಡಿ ನೀಡಿರುವ ಸ್ವತ್ತುಗಳು ಅಲ್ಲ ಎಂದರೆ ಸರಿಯಲ್ಲ. ಸರ್ವೆನಂಬರ್ 35/3 ಎ ವಿಸ್ತೀರ್ಣ 0.35 ಗುಂಟೆ ಹಾಗೂ 35/3 ಬಿ ವಿಸ್ತೀರ್ಣ 0.05 ಗುಂಟೆ ಇವು ಈ ಸ್ವತ್ತುಗಳು ವೆಂಕಟೇಶ್ ರವರ ಸ್ವಯರ್ಜಿತವಾಗಿದ್ದು, ಈ ಹಿಂದಿನ ಮೌಖಿಕ ವಿಭಾಗದಲ್ಲಿ ಅವುಗಳನ್ನು ವೆಂಕಟೇಶ್ ರವರಿಗೆ ನೀಡಲಾಗಿದೆಯೇ ಹೊರತು ಅವುಗಳು ನಿಶಾನೆ ಡಿ– 28 ರ ದಿನಾಂಕ 10.09.1986 ರ ಪಂಚಾಯಿತಿ ಪಾಲು ಪಾರಿಕತ್ತಿನಡಿ ನೀಡಿರುವ ಸ್ವತ್ತುಗಳು

ಅಲ್ಲ ಎಂದರೆ ಸರಿಯಲ್ಲ. ಹಾಗೇಯೇ ಸರ್ವೆ ನಂಬರ್ 230 ವಿಸ್ತೀರ್ಣ 0.15 ಗುಂಟೆ, ಸರ್ವೆನಂಬರ್ 72/1 ವಿಸ್ತೀರ್ಣ 0.20 ಗುಂಟೆ ಹಾಗೂ ಪಂಡವಪುರ ಟೌನ್ ಚಿಕ್ಕ ಮಸೀದಿ ಬೀದಿಯ ಆರ್ ಸಿ ಸಿ ಮನೆಯಲ್ಲಿ ಅರ್ಧ ಮನೆಯನ್ನು ನಾಗರಾಜೇಗೌಡರಿಗೆ ಈ ಹಿಂದಿನ ಮೌಖಿಕ ವಿಬಾಗದಲ್ಲಿ ನೀಡಲಾಗಿತ್ತೆ ಹೊರತು ನಿಶಾನೆ ಡಿ- 28 ರ ದಿನಾಂಕ 10.09.1986 ರ ಪಂಚಾಯಿತಿ ಪಾಲು ಪಾರಿಕತ್ತಿನಡಿ ನೀಡಿರುವ ಸ್ವತ್ತುಗಳು ಅಲ್ಲ ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ದಾಖಲೆಯು ಎಲ್ ಎ ಸಿ ಸಂಖ್ಯೆ 4/2013 ರಲ್ಲಿ ನಾನು ಹಾಜರುಪಡಿಸಿರುವ ಮುಖ್ಯವಿಚಾರಣೆ ಪ್ರಮಾಣಪತ್ರಿಕೆ ಹಾಗೂ ಪಾಟೀಸವಾಲು ಎಂದರೆ ಸರಿ. ಅದನ್ನು ನಿಶಾನೆ ಪಿ-31 ಎಂದು ಗುರುತಿಸಲಾಯಿತು. ಈ ದಾವೆಯನ್ನು ಹೂಡುವುದಕ್ಕಿಂತ ಮಾದಲು ಪ್ರಮಾಣ ಪತ್ರಿಕೆಯನ್ನು ಹಾಜರು ಪಡಿಸಿದ್ದೇನೆಂದರೆ ಸರಿ. ಸದರಿ ಪ್ರಮಾಣಪತ್ರಿಕೆಯಲ್ಲಿ ಈ ದಾವಾ ಷೆಡ್ಯೂಲ್ ಐಟಂ ನಂ 4 ದಿನಾಂಕ 10.09.1986 ರ ಪಂಚಾಯಿತಿ ಪಾಲು ಪಾರಿಕತ್ತಿನಡಿ ನಮಗೆ ಸೇರಿದೆ ಎಂದು ಹೇಳಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ತನ್ನ ತಂದೆಯೂ ತೀರಿಕೊಂಡ ನಂತರ ಸದರಿ ಪಾಲು ಪಾರಿಕತೆ ಸಿಕ್ಕಿದ ಕಾರಣ ಮೊದಲೇ ಆ ಸಂಗತಿಯನ್ನು ಹೇಳಿರಲಿಲ್ಲ. ದಿನಾಂಕ 10.09.1986 ರ ಪಂಚಾಯಿತಿ ಪಾಲುಪಾರಿಕತ್ತಿನಡಿ ವಿಭಾಗದಲ್ಲಿ ನನ್ನ ತಂದೆ ಬದುಕಿದ್ದಾಗ ನ್ಯಾಯಾಲಯದ ಪ್ರಕರಣಗಳಲ್ಲಿ ಮತ್ತು ಕಂದಾಯ ಆಧಿಕಾರಿಗಳ ಮುಂದೆ ಹೇಳಿದ್ದಾರೆ. ದಿನಾಂಕ 10.09.1986 ರ ಪಂಚಾಯತಿ ಪಾಲುಪಾರಿಕತ್ತಿನಡಿ ವಿಭಾಗ ಆಗಿದೆ ಎಂದು ನಾನಾಗಲೀ ನನ್ನ ತಂದೆಯಾಗಲೀ ನ್ಯಾಯಾಲಯದ ಪ್ರಕರಣಗಳಲ್ಲಿ ಮತ್ತು ಕಂದಾಯ ಆಧಿಕಾರಿಗಳ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಅಜ್ಜ ಪಾಲಿನ ಆಸ್ತಿಗಳಲ್ಲಿ ಹೇಗಾದರೂ ಮಾಡಿ ವಾದಿಗೆ ಪಾಲು ತಪ್ಪಿಸುವ ಸಲುವಾಗಿ ನಾನು ಹಾಗೂ ಸಾಕ್ಷಿಗಳು ಸೇರಿಕೊಂಡು ನಿಡಿ-28 ರಲ್ಲಿರುವ ದಿನಾಂಕ 10.09.1986 ರ ಪಂಚಾಯಿತಿ ಪಾಲುಪಾರಿಕತ್ತನ್ನು ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ. ದಿನಾಂಕ 10.09.1986 ರಂದು ನಿಡಿ-28 ರ ರೀತ್ಯಾ ಪಂಚಾಯಿತಿ ಪಾಲುಪಾರಿಕತ್ತು ಆಗಿಲ್ಲ ಎಂದರೆ ಸರಿಯಲ್ಲ. ಹಾಗೇಯೇ ದಿನಾಂಕ 17.09.1984 ರಂದು ನಿಡಿ-22 ರ ರೀತ್ಯಾ ಪಂಚಾಯಿತಿ

ಪಾಲುಪಾರಿಕತ್ತು ಆಗಿಲ್ಲ ಎಂದರೆ ಸರಿಯಲ್ಲ. ವೆಂಕಟೇಶ್ ರವರ ಹೆಬ್ಬೆಟ್ಟಿನ ಗುರುತನ್ನು ಸೃಷ್ಟಿ ಮಾಡಿಕೊಂಡು ನಿಡಿ–22 ಹಾಗೂ ನಿಡಿ–28 ರಲ್ಲಿನ ಪಂಚಾಯಿತಿ ಪಾಲುಪಾರಿಕತ್ತುಗಳನ್ನು ವಾದಿಗೆ ಮೋಸಮಾಡುವ ಸಲುವಾಗಿ ಸೃಷ್ಟಿಮಾಡಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂಬರ್ 72/1 ಎ ರಲ್ಲಿನ ಒಟ್ಟಾರೆ ವಿಸ್ತೀರ್ಣ 0.32 ಗುಂಟೆ ಪೈಕಿ 0.24 ಗುಂಟೆ ಜಮೀನು ಭೂ ಸ್ವಾಧೀನಗೊಂಡಿರುವ ಸಂಬಂಧ ವಾದಿಯು ತಕರಾರು ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಸಿ. ಕೆ. ದೇವೆಗೌಡರ ಹೆಸರಿನಲ್ಲುವ 0.24 ಗುಂಟೆ ಜಮೀನು ಭೂ ಸ್ವಾಧೀನಗೊಂಡಿರದೇ ನನ್ನ ಅಜ್ಜ ಸಣ್ಣಮ್ಮ ಹೆಸರಿನಲ್ಲಿರುವ ಸರ್ವೆ ನಂಬರ್ 72/1 ಎ ರಲ್ಲಿನ 0.24 ಗುಂಟೆ ಜಮೀನು ಭೂ ಸ್ವಾಧೀನಗೊಂಡಿದೆ ಎಂದು ಹೇಳಿ ಆ ಸಂಬಂಧ ಸ್ಥಳ ಪರಿಶೀಲನೆ ನಡೆಸಿ ಪರಿಹಾರ ನೀಡುವಂತೆ ವಾದಿ ವೆಂಕಟೇಶ್ ರವರು ಎಸಿ ಯವರಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿಯ ಆಧಾರದ ಮೇಲೆ ಸಂಬಂಧಪಟ್ಟ ಪ್ರಾಧಿಕಾರದವರು ಸ್ಥಳ ಪರೀಶೀಲನೆ ನಡೆಸಿ ನನ್ನ ತಂದೆ ಸಿ.ಕೆ.ದೇವೆಗೌಡರ ಹೆಸರಿನಲ್ಲಿ 0.24 ಗುಂಟೆ ಜಮೀನು ಭೂ ಸ್ವಾಧೀನಗೊಂಡಿರದೇ, ನನ್ನ ಅಜ್ಜಿ ಸಣ್ಣಮ್ಮನವರ ಹೆಸರಿನಲ್ಲಿರುವ 0.24 ಗುಂಟೆ ಜಮೀನು ಎಸಿ ರವರು ವರದಿ ನೀಡಿದ್ದಾರೆಂದರೆ ನನಗೆ ಗೊತ್ತಿಲ್ಲ.

ಸರ್ವೆ ನಂಬರ್ 72/1 ರಲ್ಲಿ ನಮ್ಮ ತಂದೆ ಹೆಸರಿನಲ್ಲಿ ಇರುವ ಜಮೀನು ನಮ್ಮ ತಂದೆಗೆ ಮಂಜೂರು ಆಗಿರದೇ ಬೆಲ್ಲಂಕೊಂಡ ಕೊಂಡಯ್ಯನವರಿಗೆ ಮಂಜೂರಾಗಿದ್ದ ಜಮಿನು ಎಂದು ಅವರ ಮಕ್ಕಳು ಅಮಲಾಜ್ಞರಿ ಅರ್ಜಿ ಸಂಖ್ಯೆ 27/2021 ರಲ್ಲಿ ತಕರಾರು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಜಮೀನಿಗೆ ಸಂಬಂಧಿಸಿದಂತೆ ಶಾಶ್ವತ ನಿರ್ಭಂಧಕಾಜ್ಞೆ ಪರಿಹಾರ ಕೋರಿ ಬೆಲ್ಲಂಕೊಂಡ ಕೊಂಡಯ್ಯನವರು ನಮ್ಮ ತಂದೆ, ತಾತ ಹಾಗೂ ಅಜ್ಜಿಯ ವಿರುದ್ಧ 1979 ರಲ್ಲಿ ಅಸಲುದಾವೆ ಸಂಖ್ಯೆ 47/1979 ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯೂ ಬೆಲ್ಲಂಕೊಂಡ ಕೊಂಡಯ್ಯನವರ ಪರ ಡಿಕ್ರಿ

ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಡಿಕ್ರಿ ವಿರುದ್ಧ ನಮ್ಮ ತಂದೆ, ತಾತ ಹಾಗೂ ಅಜ್ಜಿ ಆರ್. ಎ 36/1987 ನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಮೇಲ್ಮನವಿಯೂ ಸಹ ವಜಾ ಆಯಿತು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ರಾಜಕಾರಣದಲ್ಲಿ ಪ್ರಭಾವಿ ವ್ಯಕ್ತಿಯಾಗಿದ್ದರೂ ಅಂದರೆ ಸರಿಯಲ್ಲ. ಬೆಲ್ಲಂಕೊಂಡ ಕೊಂಡಯ್ಯನವರು ಯಾವ ಜಮೀನಿಗೆ ಸಂಬಂಧಿಸಿದಂತೆ ಡಿಕ್ರಿಯನ್ನು ಪಡೆದುಕೊಂಡಿದ್ದರೋ ಆ ಜಮೀನನನ್ನು ನಮ್ಮ ತಂದೆಯೂ ತಮ್ಮ ರಾಜಕೀಯ ಪ್ರಭಾವವನ್ನು ಬಳಸಿಕೊಂಡು 1994 ರಲ್ಲಿ ಅಕ್ರಮವಾಗಿ ತಮ್ಮ ಹೆಸರಿಗೆ ಮಂಜೂರು ಮಾಡಿಸಿಕೊಂಡರು ಅಂದರೆ ಸರಿಯಲ್ಲ. ಆ ಸಂಗತಿಯೂ ಬೆಲ್ಲಂಕೊಂಡ ಕೊಂಡಯ್ಯನವರ ವಾರಸುದಾರರ ಗಮನಕ್ಕೆ ಬಂದ ನಂತರ ಎಸಿ ರವರ ಮುಂದೆ ಮೇಲ್ಮನವಿ ಸಲ್ಲಿಸಿದರು ಎಂದರೆ ಸರಿಯಲ್ಲ. ಆ ಮೇಲ್ಮನವಿಯ ಸಂಖ್ಯೆ 46/1996-97 ಎಂದು ಆಗಿದೆ ಎಂದರೆ ಸರಿಯಲ್ಲ. ಎಸಿ ರವರು ನಮ್ಮ ತಂದೆಗೆ ಆಗಿದ್ದ ಮಂಜೂರಾತಿ ಆದೇಶವನ್ನು ರದ್ದು ಮಾಡಿದ್ದಾರೆ ಎಂದರೆ ಸರಿಯಲ್ಲ. ಮಂಜೂರಾತಿಯೂ ರದ್ದಾಗಿದ್ದರೂ ಸಹ ಕಂದಾಯ ಅಧಿಕಾರಗಳನ್ನು ಶರೀಕು ಮಾಡಿಕೊಂಡು ಸರ್ವೆನಂಬರ್ 72/1 ರಲ್ಲಿ 0.24 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಅಕ್ರಮವಾಗಿ ಮ್ಯುಟೇಷನ್ ಹಾಗೂ ಆರ್ ಟಿ ಸಿ ಯನ್ನು ನಮ್ಮ ತಂದೆ ಹೆಸರಿಗೆ ಬದಲಾಯಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಹಾಗೇ ಸೃಷ್ಟಿಸಿಕೊಂಡ ಕಂದಾಯ ದ್ಹಾಖಲೆಗಳ ಆಧಾರದ ಮೇಲೆ ಭೂಸ್ವಾಧಿನಾಧಿಗಳನ್ನು ಶರೀಕು ಮಾಡಿಕೊಂಡು ನಮ್ಮ ತಂದೆಯ ಹೇಸರಿನಲ್ಲಿ 72/1 ರಲ್ಲಿ 0.24 ಜಮೀನು ಭೂಸ್ವಾಧೀ ಆಗಿದೆ ಎಂಬಂತೆ ತೋರಿಸಿ ಪರಿಹಾರ ಪಡೆದುಕೊಳ್ಳುವ ಸಲುವಾಗಿ ಭೂ ಸ್ವಾಧೀನ ನಡವಳಿಗಳನ್ನು ನಡೆಸಿಕೆುಂಡು ಬಂದಿದ್ದಾರೆಂದರೆ ಸರಿಯಲ್ಲ. ಬೆಲ್ಲಂಕೊಂಡ ಕೊಂಡಯ್ಯನವರಿಗೆ ಆಗಿದ್ದ ಜಮೀನು ಹಾಗೂ ನಮ್ಮ ತಂದೆಯೂ ತನ್ನ ಹೆಸರಿಗೆ ಕಂದಾಯ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡ ಜಮೀನು ಎರಡುವ ಒಂದೇ ಅಂದರೆ ಸರಿಯಲ್ಲ. ಹಾಗೇ ಒಂದೇ ಆಗಿರುವ ಸರ್ವೆ ನಂಬರ್ 72/1 0.24 ವಿಸ್ತೀರ್ಣ ಒಂದೇ ಅಂದರೆ ಸರಿಯಲ್ಲ. ಯಾವ ಜಮೀನಿನ ಬಗ್ಗೆ ನಮ್ಮ ತಂದೆಯವರು ದಾಖಲೆಗಳನ್ನು ಸೃಷ್ಟಿ ಮಾಡಿದ್ದಾರೋ ಆ

ಜಮೀನು ಬೆಲ್ಲಂಕೊಂಡ ಕೊಂಡಯ್ಯನವರಿಗೆ ಮಂಜೂರಾಗಿದ್ದ ಜಮೀನು ಎಂದರೆ ಸರಿಯಲ್ಲ. ಅಮಲಾಜ್ಞರಿ ಅರ್ಜಿ ಸಂಖ್ಯ 27/2021 ರಲ್ಲಿ ಬೆಲ್ಲಂಕೊಂಡ ಕೊಂಡಯ್ಯರವರ ವಾರಸು ದಾರರು ಸಲ್ಲಿಸಿರುವ ಅರ್ಜಿ ಇತ್ಯರ್ಥಕ್ಕೆ ಬಾಕಿ ಇದೆ ಎಂದರೆ ನನಗೆ ಗೊತ್ತಿಲ್ಲ. ಘನ ಸರ್ವೋಚ್ಚ ನ್ಯಾಯಾಲಯದ ಆಧಾರದ ಮೇಲೆ 6 ತಿಂಗಳ ಒಳಗೆ ಅಮಲಾಜ್ಞರಿ ಅರ್ಜಿಯನ್ನು ಇತ್ಯರ್ಥ ಮಾಡಬೇಕೆಂಬ ಕಾರಣದಿಂದ ನ್ಯಾಯಾಲಯವು ಮುಕ್ತಾಯಗೊಳಿಸಿದೆ ಎಂದರೆ ನನಗೆ ಗೊತ್ತಿಲ್ಲ. ಹಾಗೇಯೇ ಮುಕ್ತಾಯಗೊಂಡಾಗ ಬೆಲ್ಲಂಕೊಂಡ ಕೊಂಡಯ್ಯರವರ ವಾರಸುದಾರರು ಸಲ್ಲಿಸಿರುವ ಅರ್ಜಿ ಇತ್ಯರ್ಥಕ್ಕೆ ಬಾಕಿ ಇತ್ತೆಂದು ನನಗೆ ಗೊತ್ತಿಲ್ಲ. ಹಾಗೇಯೇ, ತನ್ನ ತಾಯಿ ಸಣ್ಣಮ್ಮ ಹೆಸರಿನಲ್ಲಿರುವ ಜಮೀನು ಸ್ವಾಧೀನಗೊಳ್ಳುವ ಕಾರಣ ವಾದಿ ವೆಂಕಟೇಶ್ ರವರು ಭೂ ಪರಿಹಾರ ಕೋರಿ ಸಲ್ಲಿಸಿರುವ ಈ ದಾವೆಯೂ ಸಹ ಇತ್ಯರ್ಥಕ್ಕೆ ಬಾಕಿ ಇದ್ದ ಸಂಗತಿ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಬೆಲ್ಲಂಕೊಂಡ ಕೊಂಡಯ್ಯನ ಜಮೀನ ಭೂಸ್ವಾಧೀನಗೊಂಡಿದೆಯೋ, ಸಣ್ಣಮ್ಮನ ಜಮೀನು ಭೂಸ್ವಾಧೀನಗೊಂಡಿದಯೋ ಅಥವಾ ನನ್ನ ತಂದೆ ಸಿ.ಕೆ. ದೇವೆಗೌಡರ ಜಮೀನು ಭೂಸ್ವಾಧೀನಗೊಂಡಿದಯೋ ಎಂಬುದು ಇತ್ಯರ್ಥ ವಾಗುವ ಮೊದಲು ನಾವು ತರಾತುರಿಯಲ್ಲಿ ವಾದಿಯ ಗಮನಕ್ಕೆ ತರದೇ ಪರಿಹಾರ ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ಹಾಗೇ ಪರಿಹಾರದ ಹಣವನ್ನು ಅಕ್ರಮವಾಗಿ ಪಡೆದಿದ್ದೇವೆ ಎಂದರೆ ಸರಿಯಲ್ಲ. ಸದರಿ ಪರಿಹಾರದ ಹಣವದಲ್ಲಿ ವಾದಿ ವೆಂಕಟೇಶ್ ಗೆ 1/3 ಭಾಗಂಶದ ಹಕ್ಕು ಇದೆ ಅಂದರೆ ಸರಿಯಲ್ಲ. ನನ್ನ ರಾಜಕೀಯ ಪ್ರಭಾವ ಬಳಸಿ ತನ್ನ ಅನೂಕೂಲ ತಕ್ಕಂತೆ ದಾಖಲೆಗಳನ್ನು ಸೃಷ್ಟಿ ಮಾಡಿ ಪರಿಹಾರದ ಧನವನ್ನು ಪಡೆದುಕೊಂಡಿದ್ದೇವೆ ಅಂದರೆ ಸರಿಯಲ್ಲ. ದಾವಾ ಆಸ್ತಿಗಳು ನಮ್ಮ ಅಜ್ಜ ಪಾಲು ಆಸ್ತಿಗಳಾಗಿದ್ದು ಅವುಗಳಲ್ಲಿ ನನ್ನ ತಂದೆ ಹಾಗೂ ಚಿಕ್ಕಪ್ಪಂದಿರಿಗೆ ಸಮಾನಾ ಭಾಗಾಂಶ ಹಕ್ಕು ಇದೆ ಅಂದರೆ ಅಜ್ಜಪಾಲು ಆಸ್ತಿ ಎಂದರೆ ಸರಿ ಆದರೆ ಸಮಾನ ಹಕ್ಕು ಇಲ್ಲ. ಅಜ್ಜಪಾಲು ಆಸ್ತಿಯಲ್ಲಿ ವಾದಿಗೆ ಸಲ್ಲಬೇಕಾದ ಭಾಗಾಂಶದ ಹಕ್ಕಿನಿಂದ ಅವರನ್ನು ವಂಚಿಸಲು ಸುಳ್ಳು ದಾಖಲಯನಲ್ಳು ಸೃಷ್ಟಿಮಾಡಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

6 ನೇಪ್ರತಿವಾದಿ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನಿರಾಕರಿಸಲಾಯಿತು. ಏಕೆಂದರೆ ದಾವೆಯೂ 2021 ನೇ ಸಾಲಿನದಾಗಿದ್ದು, ದಾವೆಯೂ ವಾದ ವಿವಾದಕ್ಕೆ ಬಾಕಿ ಇದ್ದಾಗ ಕಡತವನ್ನು ಪುನಃ ತೆರೆದು ಮುಂದುವರೆದ ಮುಖ್ಯವಿಚಾರಣೆ ಹಾಗೂ ಪಾಟೀಸವಾಲು ಮಾಡಿದ್ದು, 6 ನೇಪ್ರತಿವಾದಿ ಪಾಟೀಸವಾಲು ಮಾಡಲು ಸಿದ್ಧವಿರುವುದಿಲ್ಲ.

ಮರುವಿಚಾರಣೆ ಇಲ್ಲ.

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**